ಓ.ಎಸ್ಃ 364-2008

ಡಿ. ಡಬ್ಲ್ಯು ಃ 03

**<u>ಸಾಕ್ಷಿಗೆ ದಿನಾಂಕ 06.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ನನಗೆ ವಾದಿ ಹಾಗೂ 1 ರಿಂದ 7ನೇ ಪ್ರತಿವಾದಿ ಹಾಗೂ ಅವರ ಕುಟುಂಬದ ಪರಿಚಯವಿರುತ್ತದೆ. ರಾಜೇಂದ್ರ ರವರಿಗೆ ಐಟಂ ನಂ. 5 ಸ್ವತ್ತು ವಿಭಾಗ ಮುಖಾಂತರ ಬಂದಿರುತ್ತದೆ. ಸದರಿ ರಾಜೇಂದ್ರ ರವರ ಬಳಿ ನಾನು ಸದರ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗ ಪತ್ರ ನೋಡಿಲ್ಲ, ಸಾಕ್ಷಿಯು ಅವರ ಹೆಸರಿಗೆ ಖಾತೆ ಬದಲಾವಣೆ ಆಗಿತ್ತು ಎಂದು ನುಡಿಯುತ್ತಾರೆ. ಸಮಾರು 30 ವರ್ಷಗಳ ಹಿಂದೆ ಸದರಿ ಸ್ವತ್ತು ರಾಜೇಂದ್ರ ರವರ ಪಾಲಿಗೆ ಬಂದಿರುತ್ತದೆ. ಯಾವ ಉದ್ದೇಶಕ್ಕಾಗಿ ನನಗೆ ಮಾರಾಟ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದುಕೊಳ್ಳು ವ ಸಮಯದಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಹಿತಾಶಕ್ತಿಗಳನ್ನು ನಾನು ಪರಿಶೀಲನೆ ಮಾಡಿಲ್ಲ, ಖಾತೆ ಬದಲಾವಣೆ ಆಗಿದ್ದರಿಂದ ಪರಿಶೀಲನೆ ಮಾಡಿರುತ್ತೇನೆ. ವಾದಿ 4ನೇ ಪ್ರತಿವಾದಿ ರಾಜೇಂದ್ರ ರವರ ಅಕ್ಕ ಎಂದರೆ ಸರಿ. ನಾನು ಕ್ರಯಕ್ಕೆ ಪಡೆದುಕೊಂಡ ಸ್ವತ್ತಿನಲ್ಲಿ ವಾದಿಗೂ ಸಹಾ ಭಾಗಾಂಶ ಇದೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ